

ಪ್ರತಿವರ್ಸ ಅಲೈಹಬ್ಬದ ದಿನ ಹೊಳಿಕಡೆ ಮಂದಿನೇ ತುಂಬಿರುತಿತ್ತು. ಅವತ್ತಿನ ದಿನ ದಾನಪ್ಪನ ದೇವ್ರು ಮೂಡ್ಲುಚುಕ್ಕಿ ಮೂಡಕ್ಕಿಂತ ಮುಂಚೆ ಸವಾರಿ ಎದ್ದಿರುತಿತ್ತು. ಹಲಿಗಿ, ಬ್ಯಾಂಡುಬಾಜಿನೊಂದಿಗೆ ಉಕ್ಕಿನಬಾಣದೊಂದಿಗೆ ದೇವ್ರೆದ್ದು ಊರೆಲ್ಲಾ ಹರಿಕಿಮನಿಗಳಿಗೆ ಭೇಟಿಕೊಟ್ಟ ನಂತರನೇ ಹೊಳಿಯಾಚೆಗಿನ ಊರುಕಡೆ ಹೋಗುವುದು ವಾಡಿಕಿತ್ತು. ದಾನಪ್ಪನ ದೇವ್ರು ಎಂಥ ಹೊಳಿಬಂದ್ರೂ ದಾಟಿ ತನ್ನ ಹರಿಕಿ ಮನಿಗಳಿಗೆ ಬೇಟಿಕೊಟ್ಟು ಮತ್ತೆ ತನ್ನೂರಿಗೆ ಬರ ಹೊತ್ತಿಗೆ ಹೊತ್ತು ಹಣ್ಣೆತ್ತಿಗೆ ಏರಿರುತಿತ್ತು. ಭೇಟಿನೀಡಿದ ಪ್ರತಿ ಮನೆಗಳಿಗಂತೂ ಹೇಳಿಕಿ ಹುಸಿಯಾಗಿರುತ್ತಿರಲಿಲ್ಲ. ಬಂಜೆಯಾದಕಿಗೆ ವರ್ಸ ಕಳಿಯದ್ರೊಳಗ ಮಕ್ಕಳು ಆಗಿರುತಿದ್ವು. ಗಂಡ ಸೇರಲಾರದಕಿಗೆ ಗಂಡ ಸೇರಿರುತಿದ್ದ. ವರ ಸಿಗಲಾರದವ್ರಿಗೆ ಮದ್ವಿ ಆಗಿರುತಿತ್ತು. ಮನಿಯೊಳಗ ಕಾಡಿಕಿಪಾಡಿಕಿ ಇದ್ರಂತು ಮನಿ ಶಾಂತವಾಗಿರುತಿತ್ತು.